ಮಡೆನೂರು:—ಈ ಗ್ರಾಮಕ್ಕೂ ಸಹ ತುಮಕೂರು ಜಿಲ್ಲಾಭಿವೃದ್ಧಿ ಮಂಡಳಿಯು ತನ್ನ ದಿನಾಂಕ ೧೫–೧೧–೮೩ರ ಸಭೆಯಲ್ಲಿ ಅಭಿವೃದ್ಧಿ ಯೋಜನೆ ತೆಗೆದುಕೊಳ್ಳಲು ಶಿಫಾರಸು ಮಾಡಿದೆ. ಇದಲ್ಲದೆ ೧೯೮೩ ಆಕ್ಟೋಬರ್ ಮಾಹೆಯಲ್ಲಿ ಸಂಬಂಧಪಟ್ಟ ನಲ್ಲಿಗಳಿಗೆ ಕೆಟ್ಟ ಪಂಪುಗಳಿಗೆ ವಾಲ್ವ್‌ಗಳಿಗೆ ರಿಪೆ ರಿ ಕೆಲಸ ಮಾಡಲು ರೂ. ೬,೫೦೦–೦೦ ಅಂದಾಜು ಮಂಜೂರು ಮಾಡಿ ರಿಪೇರಿ ಕೆಲಸ ತೆಗೆದು ಕೊಳ್ಳಲಾಗಿದೆ.

ನೊಣವಿನಕೆರೆ:—ಈ ಗ್ರಾಮಕ್ಕೆ ನೀರು ಸರಬರಾಜು ಅಭಿವೃದ್ಧಿ ಪಡಿಸಲು ಸರ್ಕಾರವು ಈಗಾಗಲೇ ಮಂಜೂರಾತಿಯನ್ನು ನೀಡಿದೆ. (ಆದೇಶ ಸಂಖ್ಯೆ ಆರ್‌ಡಿಸಿ ೩ ವಿಆರ್‌ಡಬ್ಲ್ಯೂ ೮೪ ದಿನಾಂಕ ೧೮–೧೧–೮೪.)

## ಕರ್ನಾಟಕದಲ್ಲಿ ಆಕ್ಟ್ರಾಯ್ ಟಿ.ಪಿ.ಸಿ. ಕರ್ಣಿಕರ ಸಂಖ್ಯೆ

೪೧ (೨೯) ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ (ಗುಳೇದಗುಡ್ಡ).—ಮಾನ್ಯ ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ಕರ್ನಾಟಕದಲ್ಲಿ ೧೯೭೯ರಿಂದ ಆಕ್ಟ್ರಾಯಿ ರದ್ದಾದ ನಂತರವೂ ಇನ್ನೂ ಕೆಲವೆಡೆ ಟಿ.ಪಿ.ಸಿ. ಆಕ್ಟ್ರಾಯಿ ಕರ್ಣೀಕರ ಸಂಖ್ಯೆ ನೂರಾರು ಇದ್ದು ೩೧–೩–೮೩ಕ್ಕೆ ಅವರನ್ನು ಕೆಲಸದಿಂದ ವಜಾ ಮಾಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಇವರನ್ನು ಪುನಃ ಸರಕಾರದ ಸೇವೆಯಲ್ಲಿ ಮುಂದುವರಿಸಲಾಗುವುದೇ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ಬಂದಿರುತ್ತೆ (ಳಳ ಮಾತ್ರ)

ಆ) ಹೌದು.

## ಶಿಕ್ಷಣ ಇಲಾಖೆಯಲ್ಲಿ ಸೇವಾ ನಿಯಮ

೪೨ (೨೬) ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ (ಗುಳೇದಗುಡ್ಡ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ಶಿಕ್ಷಣ ಇಲಾಖೆಯಲ್ಲಿ ಯಾವುದೇ ಬಡ್ತಿ ಅಥವಾ ಹುದ್ದೆಗೆ ನಿಯೋಜಿಸುವಾಗ ಸೇವಾ ಪಟ್ಟಿಯನ್ನು ಬಿಟ್ಟು ಮಾಡಲಾಗಿದೆಯೇ?

ಆ) ಹಾಗಿದ್ದಲ್ಲಿ ಯಾವುದೆ ಹಿಂದುಳಿದ ಜನಾಂಗ ಅಥವಾ ಅಲ್ಪಸಂಖ್ಯಾತರನ್ನು ನಿರ್ಲಕ್ಷಿಸ ಲಾಗಿದೆಯೇ?

ಇ) ಪ್ರತಿವರ್ಷವೂ ದರ್ಜಾ ಪಟ್ಟಿಯನ್ನು ಸಾರ್ವಜನಿಕವಾಗಿ ಪ್ರಕಟಿಸಲಾಗುತ್ತಿದೆಯೇ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

ಅ) ಇಲ್ಲ.

ಆ) (ಅ)ನಲ್ಲಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಇ) ಹೌದು. ಆದರೆ ಸಾರ್ವಜನಿಕ ಶಿಕ್ಷಣ ಇಲಾಖೆ ಜೇಷ್ಠತಾ ಪಟ್ಟಿಯನ್ನು ೧–೧–೮೦ ರವರೆಗೆ ಪ್ರಕಟಿಸಿದೆ.